# ತಿಳಿಯಲಿಲ್ಲ



**ತಮ್ಮಣ್ಣ ಬೀಗಾರ**

ಕಲೆ: ಸಂತೋಷ್ ಸಸಿಹಿತ್ಲು

ರಂಜಿತಾಳಿಗೆ ಈ ರಜೆಯಲ್ಲಿ ಮೂರು ಚಿತ್ರಗಳನ್ನು ಬಿಡಿಸುವುದು ಇದೆ. ಅವಳ ಸರ್ ಹೇಳಿದ್ದಾರೆ ರಜೆ ಮುಗಿಸಿ ಬರುವಾಗ ಮೂರು ಚಿತ್ರ ಬಿಡಿಸಿಕೊಂಡು ಬರಬೇಕು ಅಂತ. ಹಾಗೇ ಒಂದು ಕಥೆ ಓದಿ ಅದನ್ನು ನಿಮ್ಮ ಮಾತಿನಲ್ಲಿ ಬರೆದು ತರಬೇಕು ಅಂತಲೂ ಹೇಳಿದ್ದಾರೆ. ಗಣಿತದ ಸರ್ ಮತ್ತು ವಿಜ್ಞಾನದ ಟೀಚರ್ ಇಬ್ಬರೂ ಸೇರಿ ಒಂದೇ ಹೋಂವರ್ಕ್ ಕೊಟ್ಟಿದ್ದಾರೆ. ನಿಮ್ಮ ಕೇರಿಯಲ್ಲಿ ಎಷ್ಟು ಮನೆಗಳಿವೆ ಹಾಗೂ ಪ್ರತಿ ಮನೆಯ ಮುಂದೆ ಎಷ್ಟು ಮರಗಳಿವೆ ಎನ್ನುವುದನ್ನು ಲೆಕ್ಕ ಮಾಡಿ ಬರೆಯಿರಿ ಅಂತ. ಆ ರೀತಿ ಲೆಕ್ಕ ಮಾಡಿ ಒಂದು ಸಂಖ್ಯೆ ಬರೆಯುವುದಾದರೆ ಬರೆದುಬಿಡುತ್ತಿದ್ದಳು ರಂಜಿತಾ. ಆದರೆ ಪ್ರತಿ ಮನೆ ಹೆಸರು ಅಥವಾ ಯಜಮಾನನ ಹೆಸರು ಬರೆಯಬೇಕಂತೆ. ಮರಗಳನ್ನು ಆದಷ್ಟು ಗುರುತಿಸಿ ಪಟ್ಟಿ ಮಾಡಬೇಕಂತೆ! ಅಮ್ಮನ ಹತ್ತಿರ ಹೇಳಿದರೆ... ‘ನಿಮ್ಮ ಟೀಚರ್‌ಗೆ ಯಾವುದೋ ಗಣತಿ ಮಾಡುವ ಕೆಲಸ ಕೊಟ್ಟಿರಬೇಕು. ಅದನ್ನು ನಿಮ್ಮ ಹತ್ತಿರ ಮಾಡಿಸುತ್ತಾ ಇದ್ದಾರೆ’ ಅಂತ ಹೇಳುತ್ತಾಳೆ. ಹಾಗೆಲ್ಲ ಟೀಚರ್ ಮಾಡೋದಿಲ್ಲ ಎನ್ನುವುದು ರಂಜಿತಾಳಿಗೆ ಗೊತ್ತು.

ರಂಜಿತಾಳಿಗೆ ಚಿತ್ರ ಬರೆಯುವುದು ತುಂಬಾ ಇಷ್ಟ. ಅವಳ ಅಮ್ಮ ದಿನಾಲು ನಾಲ್ಕು ಬೀದಿನಾಯಿಗಳನ್ನು ಕರೆದು ಬಿಸ್ಕೀಟ್ ಹಾಕುತ್ತಿರುತ್ತಾಳೆ. ಅದೇ ನಾಯಿಗಳ ಚಿತ್ರ ಬಿಡಿಸುವುದು ಅಂತ ಯೋಚನೆ ಮಾಡಿದ್ದಾಳೆ. ಅಲ್ಲದೆ ಅವಳ ಮನೆಯಲ್ಲಿ ಕಾಳು ಬೆಕ್ಕು ಇದೆ. ಅದನ್ನು ಇನ್ನೊಂದು ಚಿತ್ರದಲ್ಲಿ ಚಿತ್ರಿಸುವುದು ಅಂತ ನಿರ್ಧರಿಸಿಬಿಟ್ಟಿದ್ದಾಳೆ. ಹಾಂ, ಹಾಗಾದರೆ ಮೂರನೆ ಚಿತ್ರ ಯಾವುದು ಅಂತೀರಾ? ಮನೆಯ ಮುಂದೆ ಇದೆ ಮಾವಿನ ಮರ. ಅದನ್ನು ಚಿತ್ರಿಸಿದರೆ ಆಯಿತು ಎನ್ನುವುದು ಅವಳ ಯೋಚನೆ.

ಅಬ್ಬ, ಶಾಲೆ ಮುಗಿದು ರಜೆ ಶುರುವಾದರೂ ಏನಾದರೂ ಕಿರಿಕಿರಿ ಇರುತ್ತಪ್ಪ. ಫ್ರೀಯಾಗಿ ಆಡೋಣ ಅಂದರೆ ಈ ಹೋಂವರ್ಕ್ ಹೆದರಿಸುತ್ತಾ ಇರುತ್ತದೆ. ಅದಕ್ಕೇ ಅದನ್ನು ಮುಗಿಸಿಯೇ ಬಿಡಬೇಕು ಎಂದು ಹಟ ತೊಟ್ಟಿದ್ದೇನೆ ಎಂದೆಲ್ಲ ಮನಸ್ಸಿನಲ್ಲಿಯೇ ಯೋಚಿಸಿದಳು. ಡ್ರಾಯಿಂಗ್ ಹಾಳೆ ಇದೆಯಾ ನೋಡಲು ಕಪಾಟಿನ ಬಾಗಿಲು ತೆರೆದಳು. ಅಷ್ಟರಲ್ಲಿ ಮನೆಯ ಮುಂದಿನ ರಸ್ತೆಯಲ್ಲಿ ನಾಯಿಗಳ ಕೂಗು ಕೇಳಿಸಿತು. ‘ಭೀಮ, ಚಿನ್ನು, ಪಿಂಕಿ, ರಾಜು ಎಲ್ಲಾ ಬಂದ್ರೂ ಅಂತ ಕಾಣುತ್ತದೆ. ಪಾಪ ಅವರಿಗೆಲ್ಲ ಹಸಿವಾಗಿರುತ್ತದೆ. ಭೀಮ ನಿನ್ನೆ ನಮ್ಮ ಮನೆಯಿಂದ ಹೋಗಲು ರೆಡಿನೇ ಇರಲಿಲ್ಲ...’ ಎನ್ನುತ್ತಾ ಬಾಗಿಲು ತೆರೆದಳು ಅವಳ ಅಮ್ಮ. ರಂಜಿತಾ ಹಾಳೆ ಹುಡುಕುತ್ತಲೇ ಇದ್ದಳು, ಏನು, ಅವರೆಲ್ಲ ಬಂದರೂ ರಂಜಿತಾ ಹೊರಗಡೆ ಹೋಗಲಿಲ್ಲ ಎಂದು ನಿಮಗೆ ಅನಿಸಿತಾ? ಅವೆಲ್ಲ ಅವರ ಮನೆಗೆ ಬರುವ ಬೀದಿ ನಾಯಿಗಳಿಗೆ ಅಮ್ಮ ಇಟ್ಟಿರುವ ಹೆಸರುಗಳು. ಅಷ್ಟು ಜನ ಗೆಳೆಯರೇ ಏನಾದರೂ ರಂಜಿತಾಳ ಮನೆ ಹತ್ತಿರ ಇದ್ದಿದ್ದರೆ ಈ ಹೋಂವರ್ಕ್ ತಲೆಗೆ ಹಾಕಿಕೊಳ್ಳುತ್ತಾನೇ ಇರಲಿಲ್ಲ ಎಂಬುದು ರಂಜಿತಾಳ ಯೋಚನೆ. ರಂಜಿತಾ ಒಂದು ಡ್ರಾಯಿಂಗ್ ಹಾಳೆ ಹುಡುಕಿ ಎಳೆದುಕೊಂಡಳು. ಈಗ ನಾನು ನಾಯಿಗಳ ಚಿತ್ರ ಬರೆಯುವುದು ಅಂತ

